ಪಂಚಮ

ಸಂಪುಟ : 1 ಶುಕ್ರವಾರ 5-11-1976 ಬೆಲೆ : 20 ಪೈಸೆ ಸಂಚಿಕೆ : 6

ದಲಿತ ಬರಹಗಾರರಲ್ಲಿ ವಿನಂತಿ

ಡಿಸೆಂಬರ್ ತಿಂಗಳು ಭದ್ರಾವತಿಯಲ್ಲಿ ದಲಿತ ಬರಹಗಾರರ ಸಮ್ಮೇಳನ ನಡೆಯುವುದು. ದಲಿತ ಬರಹಗಾರರೆಲ್ಲರೂ ತಮ್ಮ ವಿಳಾಸವನ್ನು 'ಪಂಚಮ' ಪತ್ರಿಕೆಗೆ ತಿಳಿಸಿ ಸಹಕರಿಸಿ.

—ವ್ಯವಸ್ಥಾಪಕರು

ಕಂದಾಗಾಲದಲ್ಲಿ ಹರಿಜನರಿಗೆ ಸಾಮಾಜಿಕ ಬಹಿಷ್ಕಾರ

[ವರದಿ : ನಮ್ಮ ಪ್ರತಿನಿಧಿಯಿಂದ]

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನ ಕಂದಾಗಾಲದ ಹರಿಜನರು ಕಾನೂನಿನನ್ವಯ ಜೀತ ಮಾಡುವುದು, ತೋಟಿ ತಳವಾರಿಕೆ ಮಾಡುವುದು ಸತ್ತ ಪ್ರಾಣಿ (ಹಸು-ಎಮ್ಮೆ) ಗಳನ್ನು ಹೊರುವುದನ್ನು ಬಿಟ್ಟರು. ಇದು ಸವರ್ಣೀಯರಿಗೆ ಸಹಿಸಲಸಾಧ್ಯವಾಯಿತು. ಸವರ್ಣೀಯ ಮುಖಂಡರುಗಳು ಹರಿಜನ ಯಜಮಾನರುಗಳನ್ನು ಕರೆಸಿ ನೀವು ಕೆಲ ದಿನಗಳಿಂದ ಬಿಟ್ಟಿರುವ ಕುಲ ಕಸಬುಗಳನ್ನು ಮಾಡಬೇಕೆಂದು ಒತ್ತಾಯಿಸಿದರು. ಅದಕ್ಕೆ ಹರಿಜನ ಯಜಮಾನರುಗಳು ಸರ್ಕಾರದ ಕಾನೂನು ರೀತ್ಯ ನಾವು ಅದೆಲ್ಲವನ್ನೂ ಮಾಡುವುದಿಲ್ಲ ಹೊರಟು ಬಂದರು.

ಇದಾದ ಕೆಲವು ದಿನಗಳಲ್ಲಿಯೇ ಅದೇ ಊರಿನ ಮತ್ತೀತಾಳೇಶ್ವರ ಜಾತ್ರೆ ಬಂತು. ಹರಿಜನರು ಜಾತ್ರೆ ದಿನ ದೇವಸ್ಥಾನಕ್ಕೆ ಆರತಿ ತೆಗೆದುಕೊಂಡು ಹೋಗಬೇಕಾದರೆ ಸವರ್ಣೀಯರ ಬೀದಿಯಲ್ಲೇ ಹೋಗಬೇಕು. ಈ ಸಂದರ್ಭವನ್ನು ಬಳಸಿಕೊಂಡು ಸವರ್ಣೀಯ ಪುಂಡು ಹುಡುಗರು ಆರತಿ ತರುವ ಹರಿಜನ ಹೆಂಗಸರನ್ನು ಮಾನಭಂಗ ಮಾಡುವುದು ಎಂದು ಜಾತ್ರೆಯ ಮುಂಚಿನ ದಿನಗಳಲ್ಲಿ ಹೇಳಿಕೊಂಡು ತಿರುಗತೊಡಗಿದರು. ಇದೆಲ್ಲಾ ತಿಳಿದ ಹರಿಜನರು ಭಯದಿಂದ 18-3-76ರಂದು ತಹಸೀಲ್‌ದಾರರಿಗೂ, ಪೋಲೀಸಿನವರಿಗೂ ದೂರು ಕೊಟ್ಟರು. ಆದರೆ, ಪೋಲೀಸಿನವರಾಗಲಿ, ತಹಸೀಲ್‌ದಾರರಾಗಲಿ ಊರಿಗೆ ಬಂದು ಏನೂ ವಿಷಯ ವಿಚಾರಿಸಲಿಲ್ಲ. 21-3-76ರಲ್ಲಿ ಹರಿಜನರು ಹೆದರುತ್ತಲೇ ಸವರ್ಣೀಯರ ಕೇರಿಯಲ್ಲೇ ಆರತಿ ತೆಗೆದುಕೊಂಡು ಹೋದರು. ಆದರೆ ಆವಾಗ ಏನೂ ದೌರ್ಜನ್ಯ ನಡೆಯಲಿಲ್ಲ.

ಈ ಊರಿನಲ್ಲಿರುವ ಮತ್ತೀತಾಳೇಶ್ವರ ದೇವಸ್ಥಾನಕ್ಕೆ ಚರ್ಮರೋಗದವರು ಸುತ್ತಮುತ್ತಲ ಹಳ್ಳಿಗಳಿಂದ ಬಂದು ದೇವರ ಹೆಸರಿನಲ್ಲಿ ತಲೆ ಬೋಳಿಸಿಕೊಂಡು ಹೋಗುತ್ತಾರೆ. ಹಾಗೆ ಮಾಡಿದರೆ ಚರ್ಮರೋಗ ನಿವಾರಣೆಯಾಗುವುದೆಂದು ಅವರ ನಂಬಿಕೆ. ಇಲ್ಲಿ ಇಬ್ಬರು ತಲೆಬೋಳಿಸುವವರು ಇದ್ದಾರೆ. ಒಬ್ಬ ವೃತ್ತಿಯಲ್ಲಿ ಹೆಸರು ಪಡೆದ ಕ್ಷೌರಿಕ-ಮತ್ತೊಬ್ಬ ಹರಿಜನರವನು. ತಲೆ ಬೋಳಿಸಿಕೊಳ್ಳಲು ಬಂದ ಜನಕ್ಕೆ ಇವರೇ ಜಾತಿ ಕೇಳುತ್ತಾರೆ. ಹರಿಜನರವನು ತನ್ನ ಹತ್ತಿರ ಬಂದವರು ಹರಿಜನರಲ್ಲದಿದ್ದರೆ ಕ್ಷೌರಿಕನ ಹತ್ತಿರ ಕಳಿಸುತ್ತಾನೆ. ಕ್ಷೌರಿಕ ತನ್ನ ಹತ್ತಿರ ಹರಿಜನರೇನಾದರೂ ಬಂದರೆ ಹರಿಜನರವನ ಕಡೆಗೆ ಕಳುಹಿಸಿ ಮಿಕ್ಕೆಲ್ಲ ಜಾತಿಯವರಿಗೂ ತಾನೇ ತಲೆ ಬೋಳಿಸುತ್ತಾನೆ.

ಮೇ 27ರಂದು ಹರಿಜನ ಕ್ಷೌರಿಕ ಅಂಕಯ್ಯ ಮರೆತು ಜಾತಿ ಕೇಳದೆ ಒಂದಿಬ್ಬರು ಸವರ್ಣೀಯರಿಗೆ ತಲೆ ಬೋಳಿಸಿದ. ಇದು ಆಮೇಲೆ ಗೊತ್ತಾಗಿ ಊರಿನ ಛೇರ್ಮನ್ ಹರಿಜನರೊಡನೆ ಜಗಳ ಕಾದು ಹೀನಾಮಾನವಾಗಿ ಬೈದು ಹೊಡೆಯಲೂ ಹೋದನೆಂದು ತಿಳಿದಿದೆ. ಈ ಘಟನೆಯ ಬಗ್ಗೆ ಹರಿಜನರು ಮಳವಳ್ಳಿ ಪೋಲೀಸ್ ಸ್ಟೇಷನ್ನಿಗೆ ದೂರು ನೀಡಿದರೂ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

ಪೋಲೀಸ್‌ಗೆ ದೂರು ಕೊಟ್ಟದ್ದು ಛೇರ್ಮನ್‌ಗೆ ತಿಳಿದಾಗ ಅವನು 29-5-76ರಂದು ಊರಿನ ಸವರ್ಣೀಯರ ಮುಖಂಡರುಗಳನ್ನು ಸೇರಿಸಿ ಪಂಚಾಯ್ತಿ ಮಾಡಿದರು. ಪಂಚಾಯ್ತಿಯು ಹರಿಜನರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದೆ.

ಬಹಿಷ್ಕಾರದ ರೀತಿ ಹೀಗಿದೆ : ಸವರ್ಣೀಯರು ಹರಿಜನರನ್ನು ಕೂಲಿಗೆ ಕರೆಯಬಾರದು. ಆಚಾರಿ ಕುಲುಮೆಯಲ್ಲಿ ಯಾವುದೇ

(8ನೇ ಪುಟ ನೋಡಿ)

ಪಂಚಮ ವಿಶೇಷ ಸಂಚಿಕೆ

ಮುಂದಿನ ಡಿಸೆಂಬರ್ 6ರಂದು ಅಂಬೇಡ್ಕರ್ ಅವರ ಸ್ಮರಣ ದಿನ. ಈ ಸಮಯಕ್ಕೆ 'ಪಂಚಮ' ವಿಶೇಷ ಸಂಚಿಕೆಯಾಗಿ ಬರಲಿದೆ. ಇದು ದಲಿತರ ಅನೇಕ ಸಮಸ್ಯೆಗಳನ್ನು ಚರ್ಚಿಸುವ ಲೇಖನ, ವರದಿ, ಸಂದರ್ಶನ, ಸಮೀಕ್ಷೆ, ಕಥೆ, ಕವನ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಈ ಕೆಳಗಿನ ವಿಭಾಗಗಳಿಗೆ ಬರೆಯಿರಿ.

ಅಸ್ಪೃಶ್ಯತೆ: ನನ್ನ ಅನುಭವ

ಅಸ್ಪೃಶ್ಯತೆ ಬಗ್ಗೆ ನಿಮ್ಮ ಅನುಭವವನ್ನು ನೂರು ಪದಗಳಿಗೆ ಮೀರದಂತೆ ಬರೆಯಿರಿ.

ದಲಿತ ಹೆಣ್ಣಿನ ಸಮಸ್ಯೆ ಬೇರೆ ಹೆಣ್ಣಿಗಿಂತ ಭಿನ್ನವೆ?

ಈ ವಿಭಾಗಕ್ಕೆ ಮಹಿಳೆಯರಷ್ಟೆ ಬರೆಯಬೇಕು. ನಿಮ್ಮ ಬರಹ ನೂರು ಪದಗಳಿಗೆ ಮೀರದಂತಿರಲಿ

—ಸಂಪಾದಕ
ಪಂಚಮ
2649/2
ಬಿ. ಬಿ. ಅಂಡ್ ಸನ್ಸ್ ರೋಡ್
ಕೆ. ಜಿ. ಕೊಪ್ಪಲು, ಮೈಸೂರು

ತನಿಖೆಗೆ ಅನುಮತಿ ನೀಡಿ

ಮಾನ್ಯರೆ,

ಹಿಂದಿನ 'ಪಂಚಮ'ದಲ್ಲಿ ಪ್ರಕಟವಾಗಿರುವ ಶಿವಮೂರ್ತಿಯ ಸಾವಿನ ವಿಷಯ ಎಂಥ ನರಸತ್ತವರನ್ನೂ ದಂಗುಬಡಿಸುತ್ತದೆ. ಸವರ್ಣೀಯ ಬಂಡವಾಳಶಾಹಿಗಳ ದಬ್ಬಾಳಿಕೆಯಿಂದ ಬೆಳಕಿಗೆ ಬರದೆ ಒಳಗೇ ನಶಿಸಿಹೋಗಿರುವ ಇಂತಹ ಘಟನೆಗಳು ಈ ದೇಶದ ಮಣ್ಣಿನೊಳಗೆ ಎಷ್ಟೆಷ್ಟು ಇದೆಯೋ ಯಾರಿಗೆ ಗೊತ್ತು. ಹೆಣ್ಣಿನ ಜೊತೆ ಸಂಬಂಧ ಇಟ್ಟುಕೊಂಡು ಸವರ್ಣೀಯನಾಗಿದ್ದರೆ ಬದುಕಿಕೊಳ್ಳಬಹುದಿದ್ದ ಶಿವಮೂರ್ತಿ ಹರಿಜನದವನಾದ್ದರಿಂದ ಭೀಕರ ಕೊಲೆಗೀಡಾಗಿದ್ದಾನೆ. ಅದೂ ಒಬ್ಬ ವಿಧಾನಸಭಾ ಸದಸ್ಯನಿಂದ ಇಷ್ಟೆಲ್ಲ ಆಗಿದೆ. ಎಂದಾಗಲೂ 'ಹಿಂದುಳಿದವರ ಪರ ಇದ್ದೇವೆ' ಎನ್ನುವ ಆಡಳಿತ ಮಾಡುತ್ತಿರುವ ಧುರೀಣರೇಕೆ ಇನ್ನೂ ಕಣ್ಣು ತೆರೆದಿಲ್ಲ? ಸಾವಿನ ತನಿಖೆಗೆ ಅನುಮತಿ ನೀಡಿಲ್ಲ?

ಯುವಕ ಸಂಘ
ಅಶೋಕಪುರಂ, ಮೈಸೂರು

ಪ್ರತಿಕ್ರಿಯೆ

ಅಸ್ಪೃಶ್ಯತೆಗೆ ಕೊನೆ ಎಂದು

ಮಾನ್ಯರೆ,

ಭಾರತೀಯರ ದೇಹಕ್ಕೆ ರಕ್ತ ಮಾಂಸಗಳಂತೆ ಜೀವಂತವಾಗಿ ಅಂಟಿಕೊಂಡು ಬಂದಿರುವ ಒಂದು 'ಪರಮ ಮೌಲ್ಯ' (ಕೆಲವರ ಪ್ರಕಾರ) ಎಂದರೆ ಅಸ್ಪೃಶ್ಯತೆ. ಇದು ಉದ್ದೇಶ ಪೂರ್ವಕವಾಗಿ ಮೇಲು ಜಾತಿಯವರು ತಮ್ಮ ಪ್ರತಿಷ್ಠೆಗಾಗಿ, ಪರಿಶ್ರಮವಿಲ್ಲದೆ ಕುಳಿತು ಉಣ್ಣುವುದಕ್ಕಾಗಿ ಮಾಡಿರುವ ಕಿತಾಪತಿ ಎನ್ನುವುದು ಸೂರ್ಯ ಪ್ರಕಾಶದಷ್ಟು ಸತ್ಯ.

ಈಗ ದೇಶದಲ್ಲಿ ಎಮರ್ಜನ್ಸಿ ಇದೆ. ಪ್ರಧಾನಿಯವರ 20 ಅಂಶ ಕಾರ್ಯಕ್ರಮ ಜಾರಿಯಲ್ಲಿದೆ. ಇಂಥ ಸಮಯದಲ್ಲೂ ಈ ಅಸ್ಪೃಶ್ಯತೆ ಇತ್ಯಾದಿ ಅಮಾನವೀಯ ಕಾರ್ಯಗಳು ತಮ್ಮ ಬಿಗಿ ಕಟ್ಟನ್ನು ಸಡಿಲಿಸದೆ ಗಟ್ಟಿ ನೆಲೆಯಾಗಿರುವುದು ವಿಷಾದನೀಯ. 'ಪಂಚಮ' ಈ ಬಗ್ಗೆ ದಲಿತರು ಸವರ್ಣೀಯರಿಂದ ಅನುಭವಿಸುವ ಅಮಾನುಷ ಹೇಯ ಸ್ಥಿತಿಯನ್ನು ವರದಿಮಾಡುತ್ತಿದೆ. ಹಾಗೆ ನೋಡಿದರೆ 'ಪಂಚಮ'ದ ಕಣ್ಣಿಗೆ ಬೀಳದ ಸಾವಿರಾರು ಇಂಥ ಘಟನೆಗಳು ನಡೆಯುತ್ತಲೇ ಇವೆ. ಇವರು ಜಾತಿಯಿಂದಷ್ಟೇ ಕೀಳು ಎನ್ನುವ ಕಾರಣಕ್ಕೆ ದಲಿತರನ್ನು ಅಮಾನುಷವಾಗಿ ಕೊಲೆ ಸುಲಿಗೆಗಳಿಗೆ ಈಡುಮಾಡುವ ಈ ದೇಶದಲ್ಲಿ ಜಾತ್ಯಾತೀಯತೆ ಎಷ್ಟರ ಮಟ್ಟಿಗೆ ಇದೆ ಎಂದು ಪ್ರಶ್ನಿಸಬೇಕಾಗುತ್ತೆ.

—ಸಿ. ಪಿ. ಸಿದ್ಧಾಶ್ರಮ
ಹುಲ್ಲಂಬಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ

ನಂಜನಗೂಡಿನ ಹಾಸ್ಟೆಲಿನಲ್ಲೂ

ಸಂಪಾದಕರೆ,

ಕಳೆದ 'ಪಂಚಮ'ದಲ್ಲಿ ತಾವು ಪ್ರಕಟಿಸಿರುವ ನಿಲಯಪಾಲರ ಪುಂಡುಗಾರಿಕೆ ಮತ್ತು ಹರಿಜನ ವಿದ್ಯಾರ್ಥಿಗಳ ಅಸಹಾಯಕ ಸ್ಥಿತಿಯ ರೀತಿಯಲ್ಲೇ ನಂಜನಗೂಡಿನ ಆದಿಕರ್ನಾಟಕ ಹಾಸ್ಟೆಲಿನಲ್ಲೂ ಕೂಡ ನಡೆಯುತ್ತಿದೆ. ಊಟ, ವಸತಿ ಇತ್ಯಾದಿ ಎಲ್ಲಾ ರೀತಿಯಿಂದಲೂ ತೊಂದರೆ ಅನುಭವಿಸುತ್ತಿರುವ ಇಲ್ಲಿನ ಹರಿಜನ ವಿದ್ಯಾರ್ಥಿಗಳ ಅಸಹಾಯಕ ಸ್ಥಿತಿಯನ್ನು ಮತ್ತು ನಿಲಯಪಾಲರ ನಿಜ ಸ್ಥಿತಿಯನ್ನು 'ಪಂಚಮ' ಏಕೆ ಪ್ರಕಟಿಸಿ ಮುನ್ನಡೆಯಬಾರದು.

ನಂಜನಹಳ್ಳಿ ನಾರಾಯಣ, ನಂಜನಗೂಡು ತಾ||

ಒಗ್ಗಟ್ಟೇ ಮಾರ್ಗ

ಮಾನ್ಯರೆ,

ಮೈಸೂರು ಹರಿಜನ ಹಾಸ್ಟಲೊಂದರ ನಿಲಯಪಾಲರ ಅಸಭ್ಯ ವರ್ತನೆಯ ಬಗ್ಗೆ ಮತ್ತು ಅಲ್ಲಿನ ವಿದ್ಯಾರ್ಥಿಗಳ ಬವಣೆಯ ಬಗ್ಗೆ ಕಳೆದ ಪಂಚಮದಲ್ಲಿ ಪ್ರಕಟವಾಗಿದೆ. ಒಂದು ರೀತಿಯಲ್ಲಿ ಹರಿಜನ ವಿದ್ಯಾರ್ಥಿಗಳಿಗಾಗಿ ಇರುವ ಎಲ್ಲಾ ವಿದ್ಯಾರ್ಥಿನಿಲಯಗಳೂ ಆಹಾಸ್ಟೆಲಿನ ತರದವೇ. ಹೇಗೆಂದರೆ ಸಮಾಜದಲ್ಲಿ ಗಣ್ಯರಂತೆ ಮುಖವಾಡ ಧರಿಸಿದ ಪುಡಾರಿಗಳು, ಪುಂಡರು. ಲೋಲುಪರು ವಿದ್ಯಾರ್ಥಿನಿಲಯಗಳ ನಿಲಯ ಪಾಲರಾಗಿರುತ್ತಾರೆ. ಒಂದು ಕಡೆ ಇಂಥವರನ್ನು ಎದುರಿಸಲಾರದೆ, ಇನ್ನೊಂದು ಕಡೆ ನಮ್ಮ ಕೂಗು, ಬವಣೆ ದೂರದ ಸರ್ಕಾರಕ್ಕೆ ಕೇಳಿಸದೆ, ಕಾಣಿಸದೆ. ಹಾಸ್ಟಲು ಅಂದುಕೊಳ್ಳುತ್ತಾ ತಿಪ್ಪೆಗುಂಡಿಯಲ್ಲೊ, ನಿಲಯಪಾಲ ಎಂದುಕೊಳ್ಳುತ್ತಾ ಪುಂಡರ ಕಾಲಕೆಳಗೊ ನಾವು ವ್ಯಾಸಂಗ ಮಾಡಬೇಕಾಗಿದೆ. ಇಂಥವುಗಳಿಂದ ಬಿಡಿಸಿಕೊಳ್ಳಲು ನಮಗೆ ಇರುವ ಒಂದೇ ಒಂದು ಮಾರ್ಗವೆಂದರೆ ನಾವು ಒಗ್ಗಟ್ಟಾಗುವುದು. ಮತ್ತು ಇಂಥ ಪುಂಡರ ನಿಜವಾದ ಬಣ್ಣವನ್ನು 'ಪಂಚಮ' ದಂಥ ನಮ್ಮದೇ ಪತ್ರಿಕೆಗಳಲ್ಲಿ ಬಯಲಿಗೆಳೆದು ನಮ್ಮ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳುವುದು.

ಎಸ್. ಜಯಣ್ಣ, ಕಾರ್ಯದರ್ಶಿ
ಪರಿಶಿಷ್ಟ ವರ್ಗದ ವಿದ್ಯಾರ್ಥಿ ಒಕ್ಕೂಟ, ಮೈಸೂರು

ಮುನ್ನಡೆಯಲಿ

ಪಂಚಮ ಪತ್ರಿಕೆಯು ಜಾತ್ಯಾತೀತ ರಾಷ್ಟ್ರವಾದ ನಮ್ಮ ಭಾರತದಲ್ಲಿ ಜಾತಿಯ ಹೆಸರಿನಲ್ಲಿ ನಡೆಯುತ್ತಿರುವ ಭೀಕರ, ಅಮಾನುಷ ಹಾಗೂ ಅಕ್ಷಮ್ಯ ಕಾರ್ಯಗಳನ್ನು ಎತ್ತಿತೋರಿಸುತ್ತಿದೆ. ಹೀಗೆಯೇ ಮುಂದುವರೆದು 'ಪಂಚಮ' ಪ್ರತಿ ಹಳ್ಳಿಹಳ್ಳಿಗೂ ತಲುಪಿ ದಲಿತರನ್ನು ಎಚ್ಚರಗೊಳಿಸುವತ್ತ ಮುನ್ನಡೆಯಲೆಂದು ಆಶಿಸುತ್ತೇನೆ.

ಡಾ|| ಅಂಬೇಡ್ಕರ್‌ರವರ "ಅನಿಲೇಷನ್ ಆಫ್ ಕ್ಯಾಸ್ಟ್" ಪುಸ್ತಕದ ಅನುವಾದವನ್ನು ಪ್ರಕಟಿಸುತ್ತಿರುವುದಕ್ಕೆ ವಂದನೆಗಳು.

ಅಂಬೇಡ್ಕರ್‌ರವರ ವಿಚಾರವಾಗಿ "ಶೀಲಾಮುಳವಳ್ಳಿಯವರು ಹೇಳಿರುವ ಮಾತುಗಳ ಬಗ್ಗೆ ಹೇಳುವುದಾದರೆ ಆ ಅಭ್ಯರ್ಥಿಗೆ ತಿಳಿದುಕೊಳ್ಳಬೇಕೆಂಬ ಆಸಕ್ತಿ ಇರಲಿಲ್ಲವೆಂದು ತೋರುತ್ತದೆ ಅಷ್ಟೆ. ಅದಕ್ಕೆ ಅಧ್ಯಾಪಕರಾಗಲಿ, ಶಿಕ್ಷಣ ಪದ್ಧತಿಯಾಗಲಿ ಕಾರಣ ಎಂದು ಬೆರಳು ತೋರಿಸುವುದು ಸರಿಯಲ್ಲ.

ಎಸ್. ಮಹಾದೇವಸ್ವಾಮಿ
ಸೋಸಲೆ, ಟಿ. ನರಸೀಪುರ ತಾಲ್ಲೂಕು.

ಅಳಲು

ಉಚಿತ ಹಸು-ಕುರಿ ಕೊಡಲಿ

ಸಣ್ಣ ರೈತರು ಜೀವನ ನಡೆಸುವುದೇ ಕಷ್ಟವಾಗಿರುವುದರಿಂದ ಪಶುಪಾಲನೆ, ಕುರಿ-ಕೋಳಿ ಸಾಕಾಣಿಕೆ ಮೊದಲಾದ ಪೂರಕ ವೃತ್ತಿಯನ್ನು ರೈತರು ಕೈಗೊಳ್ಳುವಂತೆ ಸರ್ಕಾರ ಸೂಚಿಸಿರುವುದು ಸ್ವಾಗತಾರ್ಹ. ಆದರೆ ರೈತರ ಸ್ವಂತ ಪ್ರಯತ್ನ ಈ ಬಗೆಯ ಉಪವೃತ್ತಿಯನ್ನು ಕೈಗೊಳ್ಳಲೆಂದು ನಿರೀಕ್ಷಿಸುವುದಾಗಲಿ, ಸಾಲ ನೀಡಿ ಹಸು ಕುರಿ ಮೊದಲಾದುವನ್ನು ಕೊಳ್ಳುವಂತೆ ವ್ಯವಸ್ಥೆ ಮಾಡುವುದಾಗಲಿ ಸರಿಯಲ್ಲ. ರೈತ ಗೊಬ್ಬರಕ್ಕೆ, ಬೀಜಕ್ಕೆ, ಉಪಕರಣಗಳಿಗೆ ಎಲ್ಲಕ್ಕೂ ಸಾಲ ಮಾಡಬೇಕಾಗಿರುವಾಗ ಮತ್ತೆ ರೈತನ ಮೇಲೆ ಸಾಲದ ಹೊರೆ. ಆದ್ದರಿಂದ ಸರ್ಕಾರ ಈ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಸಣ್ಣ ರೈತರಿಗೆ ಉಚಿತವಾಗಿ ಹಸು-ಕುರಿಗಳನ್ನೊದಗಿಸುವ ಏರ್ಪಾಟು ಮಾಡುವುದು ಒಳ್ಳೆಯದು.

ಎಂ. ಡಿ. ಹಾಸೇಗೌಡ
ಕಾವುಗೆರೆ, ಕೊಳ್ಳೇಗಾಲ ತಾಲ್ಲೂಕು.

ಸೈಟು ಯಾರಿಗಾಗಿ ?

ಮಾನ್ಯರೆ,

ಸರ್ಕಾರ ಹಿಂದುಳಿದವರಿಗೆ ಮನೆಕಟ್ಟಲು ಸೈಟು ಇತ್ಯಾದಿಗಳನ್ನು ನಿಜವಾಗಿಯೂ ದೊರಕಿಸಿಕೊಡುತ್ತಿದೆ ಎನ್ನುವುದಾದರೆ ನಮ್ಮೂರಿನಲ್ಲಿನ (ಸಿದ್ಧನಹುಂಡಿ, ಟಿ. ನರಸೀಪುರ ತಾಲ್ಲೂಕು) ಇದರ ವಿಪರ್ಯಾಸವನ್ನು ಇಲ್ಲಿ ಹೇಳಬೇಕಾಗಿದೆ.

ನೂರೈವತ್ತು ಕುಳಕ್ಕೂ ಮಿಕ್ಕಿ ಬರೀ ಹರಿಜನರೇ ಇರುವ ನಮ್ಮೂರು (ಸಿದ್ಧನಹುಂಡಿ) ಇರುವುದು ಒಂದು ಹಳ್ಳದಲ್ಲಿ. ಮಳೆ ಬಂದರೆ ಕಾಲಾಕಲಾಗುವುದಿಲ್ಲ. ಕಾಲುವೆ ಪಕ್ಕದಲ್ಲಿರುವ ಒಂದಷ್ಟು ಗುಡಿಸಲುಗಳ ಸುತ್ತ ಅಡಿಗಳಷ್ಟು ನೀರು ನಿಲ್ಲುತ್ತದೆ. ಇವುಗಳ ಜೊತೆಯಲ್ಲೇ ಬರುವ ಸೊಳ್ಳೆ ರೋಗ. ಇತ್ಯಾದಿಗಳ ಬಗ್ಗೆ ಹೇಳಬೇಕಾಗಿಲ್ಲ. ಈ ಕಾರಣಕ್ಕಾಗಿಯೇ ಮನೆಗಳನ್ನು ಬೇರೆ ಕಡೆ ಕಟ್ಟಿಕೊಳ್ಳಲು ಸುಮಾರು 20 ವರ್ಷಗಳ ಹಿಂದೆಯೇ ಸರ್ಕಾರ ಸೈಟನ್ನು 'ಅಲಾಟ್' ಮಾಡಿತು. ಆದರೆ ಈ ಜಾಗದಲ್ಲಿ ಈಗ ದೂರದಿಂದ ಬಂದ ಪುಡಾರಿಗಳ ಕಾಂಪೌಂಡ್ ಮನೆಗಳು ರಾರಾಜಿಸಲು ಶುರುವಾಗಿವೆ.

ಈ ಮಧ್ಯೆ ನಮ್ಮೂರಿನ ಶ್ರೀ ರಂಗಯ್ಯ ಮತ್ತು ಮೊಂಡಯ್ಯ ಎನ್ನುವವರು ಪಂಚಾಯ್ತಿಯಿಂದ ಕ್ರಮವಾಗಿ ಸೈಟನ್ನು ಪಡೆದು ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಮಾಜಿ ಸಮಾಜ ಕಲ್ಯಾಣ ಮಂತ್ರಿ ಶ್ರೀಮಾನ್ ಎನ್. ರಾಚಯ್ಯನವರು ತಮ್ಮ ಅಧಿಕಾರ ವದಿಯಲ್ಲಿ ಇವರನ್ನು ಸೈಟು ಬಿಡುವಂತೆ ಗದರಿಸಿ ಒತ್ತಾಯಿಸಿದರು. ಶ್ಚರ್ಯವೆಂದರೆ ಈಗಲೂ ಮೊಂಡಯ್ಯ ಮತ್ತು ರಂಗಯ್ಯನವರನ್ನು ಸೈಟು ಬಿಡುವಂತೆ ಇಲ್ಲದಿದ್ದರೆ 'ಮೀಸಾ'ದಿಂದ ಜೈಲಿಗಾಕಿಸುತ್ತೇಂದು ಗದರಿಸುತ್ತಿದ್ದಾರೆ. ಅಲ್ಲದೆ ಇದೇ ಕಾರಣಕ್ಕೆ ನಮ್ಮೂರಿನ ನೂ ತಿಳಿಯದ ಯಜಮಾನರುಗಳು ಮೊಂಡಯ್ಯ ಮತ್ತು ರಂಗಯ್ಯವರನ್ನು ಸೈಟನ್ನು ಬಿಟ್ಟುಬಿಡಬೇಕೆಂದು ಊರಿನಿಂದ ಬಹಿಷ್ಕರಿಸಿದ್ದೂ ಉಂಟು. ಕ್ರಮವಾಗಿ ಸೈಟು ಪಡೆದೂ ಇವರು ಇಷ್ಟೆಲ್ಲಾ ಷ್ಟ ಅನುಭವಿಸಬೇಕಾಗಿದೆ. ಇನ್ನೊಂದು ಕಡೆ ಊರಿನ ಪ್ರತಿಯೊಂದು ಮನೆಯಲ್ಲೂ ಎರಡು ಮೂರು ಸಂಸಾರಗಳು ಒಟ್ಟಿಗೇ ಜೀವಿಸಬೇಕಾಗಿದೆ. ಮಲಗಲೂ ಜಾಗ ಇಲ್ಲದೆ, ಮಳೆ ಬಂದರೆ ನೆನೆಯುತ್ತಾ ಬದುಕುವ ಈ ಜನಗಳಿಗೆ ಇವರಿಗೆಂದೇ ಇರುವ ಸೈಟು ಸಿಕ್ಕದೆ ಹೋಗುತ್ತಿದೆ. ಅಂದ ಮೇಲೆ 20 ವರ್ಷಗಳ ಹಿಂದೆಯೇ 'ಅಲಾಟ್' ಆಗಿರುವ ಜಾಗ ಯಾರಿಗಾಗಿ ? ಪುಡಾರಿಗಳಿಗಾ ಪುಂಡರುಗಳಿಗಾ ಅಥವಾ........?

ದಲಿತರ ಪರ ಇರುವ ಸರ್ಕಾರ ಕಣ್ಣು ಬಿಡಬೇಕು ?

—ಎಂ. ರಂಗಸ್ವಾಮಿ, ಅಧ್ಯಕ್ಷ
ಯುವಕ ಸಂಘ, ಸಿದ್ದನಹುಂಡಿ, ಟಿ. ನರಸೀಪುರ ತಾಲ್ಲೂಕು

ಮತ್ತೆಲ್ಲಿಗೆ ಈ ನತದೃಷ್ಟರ ಪಯಣ

ಬೆಂಗಳೂರು ಜಿಲ್ಲೆ ಕನಕಪುರ ತಾಲ್ಲೂಕು ಹಾರೋಹಳ್ಳಿ ಹೋಬಳಿ ಗುಳ್ಳೆಟ್ಟಿ ಕಾವಲು ಮುನಿನಗರ ಕಾಲೋನಿಯ 60 ಹರಿಜನ ಸಂಸಾರದ ಮನವಿ :

ಸ್ವಾಮಿ,

ನಾವು ರಾಮನಗರಂ ತಾಲ್ಲೋಕು ಬೈರಮಂಗಲ ಕೆರೆ ಮುಳುಗಡೆಗೆ ತುತ್ತಾಗಿ ನಮ್ಮ ವಸತಿ ಮತ್ತು ಜೀವನೋಪಾಯಕ್ಕೆ ಇದೇ ರಾಮನಗರಂ ತಾಲ್ಲೋಕು ಕಲ್ಲುಗೋಪಳ್ಳಿ ಸ್ಟೇಟ್ ಫಾರೆಸ್ಟ್‌ಗೆ ವಲಸೆ ಹೋಗಿ ಅಲ್ಲಿಂದ ಓಡಿಸಲಾಯಿತು. ಮತ್ತು ನಾವು ಅಲ್ಲಿಂದ ಬೆಂಗಳೂರು ದಕ್ಷಿಣ ತಾಲ್ಲೋಕು ತಲಗಟ್ಟ ಪುರ ಫಾರಸ್ಟ್‌ಗೆ ವಲಸೆ ಬಂದು ನಮ್ಮ ಸಂಸಾರಗಳ ಸಮೇತ ನೆಲೆಸಿರುವಾಗ ಅಲ್ಲಿಂದಲೂ ನಮ್ಮನ್ನು ಓಡಿಸಲಾಯಿತು. ಕೊನೆಗೆ ನಿರ್ಗತಿಕರಾದ ನಾವು ಘನ ಸರಕಾರವನ್ನು ಬೇಡಿಕೊಳ್ಳಲಾಗಿ ಕೊನೆಗೆ ಈಗ ಹಾಲೀ ವಾಸಮಾಡುತ್ತಿರುವ ಗುಳ್ಳೆಟ್ಟಿ ಕಾವಲು ಮುನಿನಗರದಲ್ಲಿ ತಲಾ 4-0 ಎಕರೆಯನ್ನು ಮಂಜೂರು ಮಾಡಿದ್ದಲ್ಲದೆ ಗ್ರಾಮಠಾಣಕ್ಕೆ 10-00 ಎಕರೆ ಜಮೀನನ್ನು ನಂಬರು ಎ ಎಫ್ 507,—10, ಎಫ್ ಟಿ 13—51—2 ದಿನಾಂಕ 17-4-1951 ಮತ್ತು ಎ ಎಫ್ 4192—96, ಎಫ್ ಟಿ 11·53-6 ದಿನಾಂಕ 14-7-53 ರಲ್ಲಿ 250 ಎಕರೆ ಜಮೀನನ್ನು ಮೇಲ್ಕಂಡ ಫಾರಸ್ಟ್‌ನಲ್ಲಿ ಮಂಜೂರು ಮಾಡಲಾಗಿ, 1951 ನೇ ಇಸವಿಯಿಂದ ನಮ್ಮ ಜೀವನೋಪಾಯ ನಡೆಸಿಕೊಂಡು ಬರುತ್ತಿರುವಲ್ಲಿ ಹಠಾತ್ತನೆ ನಮ್ಮ ಕಾಲೋನಿಯ ಹತ್ತಿರ ಒಂದು ಹೊಸ ಕೆರೆಯನ್ನು ಕಟ್ಟುವುದಕ್ಕೆ ತಳಹದಿ ಹಾಕುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ಮಾನ್ಯ ಮುಖ್ಯಮಂತ್ರಿಯವರಿಗೂ ಮತ್ತು ಇತರೆ ಮಂತ್ರಿಗಳಿಗೂ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೂ, ತಾ|| 14-4-76 ರಲ್ಲಿ, ಈ ಕೆರೆ ನಮಗೆ ಸೇರಿದ ಜಮೀನಿನಲ್ಲಿ ಕಟ್ಟುವುದರಿಂದ ನಮಗೆ ಕೊಟ್ಟಿರುವುದರಲ್ಲಿ 120 ಎಕರೆ ಜಮೀನು ಮುಳುಗಡೆಯಾಗುವುದರಿಂದ ಈಗ ಕಟ್ಟಬೇಕೆಂದಿರುವ ಸ್ಥಳವನ್ನು ಬದಲಾಯಿಸಿ ನಾಲ್ಕು ಫರ್ಲಾಂಗು ಮುಂದಕ್ಕೆ ಹಾಕಬೇಕೆಂದು, ಈಗ ಕಟ್ಟುವ ಕೆರೆಯಿಂದ ನಮಗೆ ಯಾವ ಕಿಂಚಿತ್ತು ಪ್ರಯೋಜನವಾಗಲಾರದೆಂದು ಮನವಿ ಮಾಡಿಕೊಳ್ಳಲಾಯಿತು. ಆದರೂ ಸಹಾ ಇನ್ನೂ ಕೆರೆಯ ಕಾಮಗಾರಿ ನಡೆಯುತ್ತಲಿದೆ.

ಹರಿಜನ ಗಿರಿಜನ ಮತ್ತು ಬಡವರ ಉದ್ಧಾರವೇ ನಮ್ಮ ಮುಖ್ಯ ಧ್ಯೇಯ ಎಂದು ಹೇಳಿಕೊಳ್ಳುವ ಸರಕಾರ ಈ ಹರಿಜನರ ಮನವಿಯನ್ನು ಮನ್ನಿಸದೇ ಕೆರೆ ಕಟ್ಟುವುದಾದರೆ ಮಿಕ್ಕ ಇನ್ನೆರಡು ಎಕರೆ ಖುಷ್ಕಿ ಜಮೀನಿನಲ್ಲಿ ಜೀವನೋಪಾಯ ನಡೆಸುವುದಾದರೂ ಹೇಗೆ ? ಈಗಲಾದರೂ ಈ ಘನ ಸರಕಾರವು ಈ ಬಡ ಹರಿಜನರ ಮನವಿಯನ್ನು ಈಡೇರಿಸುವುದೆಂದು ನಂಬೋಣವೇ ?

ತಾ|| 13-9-1976 /-ಇತಿ ನೊಂದವರು
ಮುನಿಸಾಗರ (ಮುನಿನಗರ) 60 ಮನೆಯ ಸಂಸಾರದ ಸಹಿ ಇಲ್ಲಿದೆ

ಮಾನಸಿಕ ಗುಲಾಮಗಿರಿ ಮಾತ್ರವೇ ಅಲ್ಲದ ಕ್ರೂರ ಅಸ್ಪೃಶ್ಯತೆ ನಿವ

'ಅಸ್ಪೃಶ್ಯತೆ ಹೋಗಲಾಡಿಸಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ'. ಅದರೂ ಇಂದು ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಅಸ್ಪೃಶ್ಯತೆ ನಿಚ್ಚಳವಾಗಿಯೇ ಇದೆ. ಈ ದಿಸೆಯಲ್ಲಿ ಕರ್ನಾಟಕ ಸರ್ಕಾರ ಬಹಳಷ್ಟು ಕಾನೂನು ಮಾಡಿದೆ. ಅವುಗಳನ್ನು ಇಲ್ಲಿ ಕೊಟ್ಟಿದೆ.

1. ಜಿಲ್ಲಾಧಿಕಾರಿಗಳು ಮತ್ತು ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆಗಳನ್ನಿತ್ತು, ಕುಡಿಯುವ ನೀರು ದೊರಕದಂತೆ ಅಡ್ಡಿಯಿರುವ ಕಡೆಗಳಲ್ಲೆಲ್ಲಾ ಕ್ರಮಕೈಕೊಂಡು ಹರಿಜನರಿಗೆ ಕುಡಿಯುವ ನೀರನ್ನು ದೊರಕುವಂತೆ ಮಾಡುವುದು.
2. ಸಹಬಾಳ್ವೆಗೆ ಉತ್ತೇಜನ ಕೊಡಲು ಸವರ್ಣೀಯರ ಮಧ್ಯದಲ್ಲೇ ಮನೆ ಕಟ್ಟಲು ಹರಿಜನರಿಗೆ ನಿವೇಶಗಳನ್ನು ಕೊಡುವಂತೆ ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳಿಗೆ ಸೂಚಿಸಿದೆ.
3. ಮನೆ ಕಟ್ಟುವ ನಿವೇಶನಕ್ಕೆ, ಉಳುಮೆ ಜಮೀನಿಗೆ ಹರಿಜನರು ಅರ್ಜಿಗಳನ್ನು ಹಾಕಿದಾಗ ಅವುಗಳನ್ನು ಕ್ಷುದ್ರ ಕಾರಣಗಳಿಗಾಗಿ ತಿರಸ್ಕರಿಸದೆ ಉದಾರ ಭಾವನೆಯಿಂದ ಪರಿಗಣಿಸಲು ಗ್ರಾಮ ಪಂಚಾಯಿತಿಗಳಿಗೆ ಸಲಹೆ ಮಾಡಿದೆ. ಸವರ್ಣೀಯರ ಸ್ವಭಾವಸಿದ್ಧ ವೈರವನ್ನು ಮನಸ್ಸಿನಲ್ಲಿಟ್ಟುಕೊಂಡು ಅವರ ತಕರಾರುಗಳೇನಾದರು ಇದ್ದಲ್ಲಿ ಅವನ್ನು ಪರಿಗಣಿಸಬೇಕು, ಮತ್ತು ಸಾರ್ವಜನಿಕ ಅಗತ್ಯದ ಸಕಾರಣಗಳುಳ್ಳ ತಕರಾರುಗಳಿಗೆ ಪುರಸ್ಕಾರ ಕೊಡಬೇಕು.
4. ಅಸ್ಪೃಸ್ಯತೆಯನ್ನು ಅನುಸರಿಸುತ್ತಿರುವ ಹಳ್ಳಿಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರವು ನಿಲ್ಲಿಸ ಬೇಕಾಗುತ್ತದೆಂಬುದನ್ನು ಜಿಲ್ಲೆಯಲ್ಲಿರುವ ಪ್ರತಿ ಹಳ್ಳಿಗೂ ಸ್ಪಷ್ಟವಾಗಿ ತಿಳಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.
5. ಸಮುದಾಯ ಕೇಂದ್ರ, ಆರೋಗ್ಯಕೇಂದ್ರ, ಶಿಶುಕಲ್ಯಾಣ ಕೇಂದ್ರ, ಶಾಲೆಗಳು ಮುಂತಾದ ಕಲ್ಯಾಣ ಸಂಸ್ಥೆಗಳು ಸಾಧ್ಯವಾದ ಮಟ್ಟಿಗೂ ಹರಿಜನ ಕಾಲನಿಗಳಲ್ಲಿ ಇರುವಂತೆ ಸೂಚಿಸಿದೆ.
6. ಕ್ಯಾಂಟೀನು, ಅಂಗಡಿ ಅಥವಾ ಹೊಟೆಲುಗಳಲ್ಲಿ ನೀರು. ಟೀ ಅಥವಾ ತಿನಿಸುಗಳನ್ನು ಕೊಡಲು ಕನಿಷ್ಠ ಒಬ್ಬನಾದರು ಹರಿಜನನನ್ನು ನೇಮಿಸಿಕೊಳ್ಳಬೇಕೆಂದು ಸರ್ಕಾರವು ಸರ್ಕ್ಯುಲರ್ ನಂ. P & D 48 SEB 59 ತಾ|| 29-7-1959ರಲ್ಲಿ ನಿರ್ದೇಶಿಸಿದೆ.
7. ಮಲವನ್ನು ತಲೆಯ ಮೇಲೆ ಬಕೆಟ್ಟುಗಳಲ್ಲಿ ಹೊರುವ ಪದ್ಧತಿಯನ್ನು ತಡೆಗಟ್ಟಲು ಸ್ಥಳೀಯ ಸಂಸ್ಥೆಗಳು ಕೈಗಾಡಿಗಳನ್ನು ಕೊಳ್ಳುವಂತೆ ಮನವೊಲಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.
8. ಸಾರ್ವಜನಿಕ ಸ್ಮಶಾನವನ್ನು ಬಳಸದಂತೆ ಅಡ್ಡಿಪಡಿಸುವ ಸವರ್ಣೀಯರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವಂತೆ ಪೋಲೀಸ್ ಅಧಿಕಾರಿಗಳಿಗೆ ಅಸ್ಪೃಶ್ಯತಾ ನಿವಾರಣೆ ಕಾಯಿದೆಯನ್ವಯ ಐ. ಜಿ. ಪಿ. ಯವರ ಸರ್ಕ್ಯುಲರ್ ನಂ. C. 421/61 ತಾ|| 26 8-1961ರಲ್ಲಿ ಸೂಚಿಸಿದೆ,
9. ಪೋಲೀಸ್ ಅಧಿಕಾರಿಗಳು ಹರಿಜನ ಕಾಲನಿಗಳಿಗೆ ಸಾಮಾನ್ಯ ಉಡುಪಿನಲ್ಲಿ ಹೋಗಿ ಅವರ ಕುಂದು ಕೊರತೆಗಳನ್ನು ವಿಚಾರಿಸಿ ನಿವಾರಣ ಕ್ರಮಗಳನ್ನು ಕೈಗೊಳ್ಳುವಂತೆ ಐ. ಜಿ. ಪಿ. ಯವರ ಸರ್ಕ್ಯುಲರ್ ನಂ. Law-1-6/66 ತಾ|| 23-2-1969ರಲ್ಲಿ ಸೂಚಿಸಿದೆ.
10. ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳ ಪೋಲೀಸ್ ಸೂಪರಿಂಟೆಂಡೆಂಟರಿಗೆ ಬೊಂಬಾಯಿ ಹಿಂದೂ ಸಾರ್ವಜನಿಕರ ಪೂಜಾಸ್ಥಳ ಪ್ರವೇಶಾಧಿಕಾರ ಕಾಯಿದೆಯು ಅವರ ಜಿಲ್ಲೆಗಳಲ್ಲಿ ಪರಿಣಾಮಕಾರಿಯಾಗಿ ಅನ್ವಯಿಸುವಂತೆ ಐ. ಜಿ. ಪಿ. ಯವರ ಸರ್ಕ್ಯುಲರ್ ನಂ. Law-1-123/66 ತಾ|| 8-12-76 ರಲ್ಲಿ ಸೂಚಿಸಿದೆ.
11. ಮದರಾಸು ದೇವಸ್ಥಾನ ಪ್ರವೇಶ ಅಧಿಕಾರ 1947ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಗೊಳಿಸಲು ಅಲ್ಲಿನ ಪೋಲೀಸ್ ಸೂಪರಿಂಟೆಂಡೆಂಟರಿಗೆ ಐ. ಜಿ. ಪಿ. ಯವರ ಸರ್ಕ್ಯುಲರ್ ನಂ. Law 1-123/66 ತಾ|| 14-12-1966ರಲ್ಲಿ ಸೂಚಿಸಿದೆ.
12. ಸರ್ಕಾರಿ ನೌಕರನು ಅಸ್ಪೃಶ್ಯತೆಯನ್ನು ಯಾವ ರೂಪದಲ್ಲಾದರು ಆಚರಿಸಿದರೆ ಅವನು ಶಿಕ್ಷೆಗೆ ಗುರಿಯಾಗುತ್ತಾನೆ ಮತ್ತು ಅವನ ಆ ನಡತೆಯಿಂದ ನಿಯಂತ್ರಣ ಮತ್ತು ಶಿಸ್ತಿನ ಸೂಕ್ತ ಕಾನೂನು ವಿಧಿಸುವ ದಂಡಕ್ಕೂ ಬದ್ಧನಾಗುತ್ತಾನೆ. ಸರ್ಕಾರಿ ನೌಕರರು ಅಸ್ಪೃಶ್ಯತೆಯ ಸಂಪೂರ್ಣ ನಿರ್ಮೂಲನೆಯಲ್ಲಿ ಭಾಗಿಗಳಾಗಿ ಇತರರಿಗೆ ಮಾದರಿಯಾಗಬೇಕೆಂದು ಸರ್ಕಾರಿ ಸರ್ಕ್ಯುಲರ್ ನಂ. PHS 14 SDT 67, ತಾ|| 14-4-1967,ರಲ್ಲಿ ನಿರ್ದೇಶಿಸಿದೆ.
13. ಅಸ್ಪೃಶ್ಯತೆ ಮತ್ತು ಭೇದಗಳ ಘಟನೆಗಳ ಸುದ್ದಿಯನ್ನು ತಿಳಿಸುವ ಹರಿಜನ ವ್ಯಕ್ತಿಗೆ ಅಗತ್ಯ ರಕ್ಷಣೆಯನ್ನೊದಗಿಸಲು ಪೋಲೀಸ್ ಅಧಿಕಾರಿಗಳಿಗೆ ಐ. ಜಿ. ಪಿ. ಯವರ ಸರ್ಕ್ಯುಲರ್ ನಂ Law-1-25/7/ ತಾ|| 9-3-1971ರಲ್ಲಿ ಸೂಚಿಸಿದೆ.
14. ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆ 1959ರ ವಿಧಿ 5 (2)ರಲ್ಲಿ ಗೊತ್ತುಪಡಿಸುವಂತೆ ಅನುಸೂಚಿತ ಜಾತಿಗಳಿಗೆ ಸ್ಥಾನಗಳನ್ನು ಮೀಸಲಿರಿಸಿದೆ.
15. ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆಯ ವಿಧಿಯಂತೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಅನುಸೂಚಿತ ಜಾತಿಗಳಿಗೆ ಸ್ಥಾನಗಳನ್ನು ಮೀಸಲಿಟ್ಟಿದೆ. ಮೀಸಲು ಸ್ಥಾನಗಳ ಸಂಖ್ಯೆ ಅಲ್ಲಿನ ಒಟ್ಟು ಸ್ಥಾನಗಳ ಸಂಖ್ಯೆ. ಹರಿಜನರ ಜನ ಸಂಖ್ಯೆ ಮತ್ತು ತಾಲ್ಲೂಕಿನ ಒಟ್ಟು ಜನ ಸಂಖ್ಯೆಯನ್ನು ಅವಲಂಭಿಸಿದೆ.

ರಿಸಲು ಸರ್ಕಾರದ ಕ್ರಮಗಳು

6. ಅನುಸೂಚಿತ ಜಾತಿಗಳ ಕಲ್ಯಾಣವು ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆಯ 43ನೇ ವಿಧಿಯಲ್ಲಿ ಗ್ರಾಮ ಪಂಚಾಯಿತಿಯ ಐಚ್ಛಿಕ ಕರ್ತವ್ಯವಾಗಿದ್ದು ಅದನ್ನು ಕಡ್ಡಾಯ ಕರ್ತವ್ಯವಾಗಿ ಪರಿವರ್ತಿಸುವ ಆಲೋಚನೆ ಸರ್ಕಾರಕ್ಕಿದೆ.

7. ಅದೇ ಕಾಯಿದೆಯ 131 (A) (Viii)ನೇ ವಿಧಿಯಲ್ಲಿ "ಅನುಸೂಚಿತ ಜಾತಿಗಳನ್ನು ಮೇಲೆತ್ತುವ ಕ್ರಮಗಳು" ತಾಲ್ಲೂಕು ಅಭಿವೃದ್ಧಿ ಮಂಡಲಿಯ ಐಚ್ಛಿಕ ಕರ್ತವ್ಯವಾಗಿದೆ. ಅದನ್ನು ಕಡ್ಡಾಯಗೊಳಿಸುವ ಆಲೋಚನೆಯನ್ನು ಸರ್ಕಾರ ಮಾಡುತ್ತಿದೆ.

8. ಅದೇ ಕಾಯಿದೆಯ 187 (Vi)ನೇ ವಿಧಿಯಂತೆ ಜಿಲ್ಲಾ ಅಭಿವೃದ್ಧಿ ಕೌನ್ಸಿಲ್‌ಗೆ ಅನುಸೂಚಿತ ಜಾತಿಗಳ ವ್ಯಕ್ತಿಯೊಬ್ಬನನ್ನು ಸರ್ಕಾರವು ನಾಮಕರಣ ಮಾಡುತ್ತದೆ.

. ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಕಾಯಿದೆಯ 127ನೇ ವಿಧಿಯಲ್ಲಿ ಹರಿಜನ ಕಲ್ಯಾಣ ಉಪಸಮಿತಿಯನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಯು ರಚಿಸಬಹುದು.

ತಾಲೂಕು ಅಭಿವೃದ್ಧಿ ಮಂಡಲಿಗಳ ಬಜೆಟ್ಟನಲ್ಲಿ ಶೇ. 18 ಭಾಗವನ್ನು ಹರಿಜನ/ಗಿರಿಜನ ಕಲ್ಯಾಣ ಕಾರ್ಯಗಳಿಗೆ ಮೀಸಲಿಡಲು ಸರ್ಕ್ಯುಲರ್ ನಂ. DCP 127 RAC 69, ತಾರಿಖು 17-3-1970 ರಲ್ಲಿ ತಿಳಿಸಿದೆ.

ಹರಿಜನ, ಗಿರಿಜನ ಅಭಿವೃದ್ಧಿಗೆ ಗೊತ್ತುಪಡಿಸಿದ ಹಣವನ್ನು ಸಮಾಜ ಕಲ್ಯಾಣ ಇಲಾಖೆಯ ಡೈರಕ್ಟರ್ ಸಲಹೆಯನ್ನು ಸಂಪೂರ್ಣ ಉಪಯೋಗಿಸಲು ತಾಲ್ಲೂಕು ಅಭಿವೃಧಿ ಮಂಡಲಿಗಳಿಗೆ ಸೂಚಿಸುವಂತೆ ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳನ್ನು ಕೋರಿದೆ. ಸರ್ಕ್ಯುಲರ್ ನಂ. DPC 147/RAC/71 ತಾ|| 15-2-1972.

ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವ ಕಾರ್ಯಕ್ರಮವನ್ನು ಹಾಕುವಾಗ ಹರಿಜನರ ಅಗತ್ಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಮತ್ತು ಸಾಧ್ಯವಾದಷ್ಟು ಮಟ್ಟಿಗೂ ಹರಿಜನ ಕಾಲನಿಗಳಿಗೆ ಸಮೀಪವಾಗಿ ಅಂಥ ಬಾವಿಗಳನ್ನು ತೋಡಿಸಬೇಕು. ಹರಿಜನರ ಜನಸಂಖ್ಯೆ 100 ಅಥವಾ ಹೆಚ್ಚು ಇದ್ದು ಅಲ್ಲಿ ಈಗಾಗಲೆ ಒಂದು ಬಾವಿ ಇದ್ದಾಗಲೂ ಆ ನಿಯಮವನ್ನು ಅನ್ವಯಿಸಬೇಕು ಎಂದು ಸರ್ಕ್ಯುಲರ್ ನಂ. DPC 57 DWW 71 ತಾ|| 22-6-1971ರಲ್ಲಿ ಅಭಿವೃದ್ಧಿ ಕಮಿಷನರರು ತಿಳಿಸಿದ್ದಾರೆ.

ಗೃಹ ನಿರ್ಮಾಣ ಮಂಡಲಿಯು ಕನಿಷ್ಠ ವರಮಾನದವರು ಮತ್ತು ಮಧ್ಯಮ ವರಮಾನ ವರ್ಗದವರಿಗೆ ಮನೆಗಳನ್ನು ಕಟ್ಟಿಸುವಾಗ ಶೇ. 15ನ್ನು ಹರಿಜನರಿಗೂ ಮತ್ತು ಶೇ. 3ನ್ನು ಗಿರಿಜನರಿಗೂ ಸಾಮಾನ್ಯ ನಿಯಮದಂತೆ ಮೀಸಲಿಡಬೇಕು.

(7ನೇ ಪುಟ ನೋಡಿ)

ದಾಖಲೆಗಳು

● ಗೌರಿಬಿದನೂರು—ಹೋಸಕ ಹೋಬಳಿ ಗೆದರೆ ಗ್ರಾಮದ ಹರಿಜನರ ಆಂಜನಪ್ಪ ಎಂಬುವರ ಮನೆಯ ಮೇಲೆ ಅದೇ ಗ್ರಾಮದ ಕೆಲವು ಪ್ರಮುಖರು ದಾಳಿ ನಡೆಸಿ ಅವರ ತಂದೆ ಹಾಗೂ ಅಣ್ಣನವರ ಕೈಗಳನ್ನು ಕಟ್ಟಿಹಾಕಿ ಸಾಮಾನುಗಳನ್ನು ದೋಚಿಕೊಂಡು ಹೋಗಿದ್ದಾರೆ. ಮನೆಯನ್ನು ನೆಲಸಮ ಮಾಡಲಾಗಿದೆ.

—ಸಂಯುಕ್ತ ಕರ್ನಾಟಕ 7-1-76

● ಗೋಕಾಕ, ಫೆ1— ಇಲ್ಲಿಗೆ 20 ಕಿ.ಮೀ. ದೂರದ ಕುಲಿಗೋಡ ಗ್ರಾಮದಲ್ಲಿ ಹರಿಜನ ಯುವಕ ಭೀಮಪ್ಪ ಸೈಕಲ್ ತುಳಿದುಕೊಂಡು ಹೋಗುತ್ತಿದಾಗ ಮೂರು ಜನ ಸವರ್ಣೀಯರು ಹಲ್ಲೆ ನಡೆಸಿ ಭೀಮಪ್ಪನ ಎರಡು ಕಾಲುಗಳ ಮೊಳಕಾಲಿನ ಕೆಳಭಾಗವನ್ನು ಕಡಿದು ಹಾಕಿದ್ದಾರೆ.

—ಕನ್ನಡ ಪ್ರಭ 2-2-76

● ಲಖನೌ: ಫೆ 3 ವಾರಣಾಸಿ ಜಿಲ್ಲೆ ಮಣಿಕ್‌ಪುರ ಗ್ರಾಮದಲ್ಲಿ ಇತ್ತೀಚೆಗೆ ಸವರ್ಣೀಯ ಹಿಂದು ಒಬ್ಬ ತನ್ನ ವಶದಲ್ಲಿದ್ದ ಜಮೀನನ್ನು ಗ್ರಾಮಸಭೆಯವರು ಹರಿಜನನೊಬ್ಬನಿಗೆ ಹಂಚಿದಾಗ ಕೋಪಗೊಂಡು ಹರಿಜನ ಕುಟುಂಬದ ಆರು ಮಂದಿಯ ಮೇಲೆ ಗುಂಡು ಹಾರಿಸಲು ಪ್ರಯತ್ನಿಸಿದ ಘಟನೆ ವರದಿಯಾಗಿದೆ.

ಈ ವಿಷಯವನ್ನು ಗೃಹಖಾತೆ ಸ್ಟೇಟ್ ಸಚಿವ ಧರ್ಮವೀರ್ ಅವರು ನಿನ್ನೆ ಇಲ್ಲಿ ಪತ್ರಕರ್ತರಿಗೆ ತಿಳಿಸುತ್ತಾ ಈ ಘಟನೆಯಿಂದ ಇಬ್ಬರು ಮಹಿಳೆಯರು ಸೇರಿದಂತೆ ಹರಿಜನ ಕುಟುಂಬದವರು ಗುಂಡಿ ನೇಟಿನಿಂದ ಗಾಯಗೊಂಡಿರುವುದಾಗಿ ನುಡಿದರು. ಈ ಹರಿಜನ ಕುಟುಂಬದವರಿಗೆ ಪೋಲಿಸ್ ರಕ್ಷಣೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಈ ಘಟನೆಗಿಂತ ಮುಂಚಿತವಾಗಿ ಸಮೀಪದಲ್ಲಿನ ನದಿಯಿಂದ ಸ್ನಾನ ಮಾಡಿ ಬರುತ್ತಿದ್ದ 16 ವರ್ಷದ ಹರಿಜನ ಬಾಲಕನ ಮೇಲೆ ಕೆಲವು ಸವರ್ಣೀಯ ಹಿಂದೂಗಳು ಲಾಠಿಯಿಂದ ಹಲ್ಲೆ ನಡೆಸಿದರು. ಬಾಲಕನ ರಕ್ಷಣೆಗೆ ಅವನ ಕುಟುಂಬದವರು ಬಂದಾಗ ಸವರ್ಣೀಯ ಹಿಂದು ಒಬ್ಬ ಅವರ ಮೇಲೆ ಗುಂಡುಹಾರಿಸಲು ಪ್ರಯತ್ನಿಸಿದ ಎಂದು ಧರ್ಮವೀರ್ ತಿಳಿಸಿದರು.

—ಪ್ರಜಾವಾಣಿ 4-2-76

● ಹೈದರಾಬಾದ್: ಕೃಷ್ಣಾ ಜಿಲ್ಲೆಯ ಚಿತ್ರಾಯ್ ಎಂಬ ಹಳ್ಳಿಯಲ್ಲಿ ಹರಿಜನ ಹುಡುಗನೊಬ್ಬ ನೀಟಾಗಿ ಬಟ್ಟೆ ಹಾಕಿಕೊಂಡಿದ್ದಕ್ಕಾಗಿ ಇಬ್ಬರು ಸವರ್ಣೀಯರು ಆತನ ಬಟ್ಟೆ ಬಗ್ಗೆ ಪ್ರಶ್ನಿಸಿ ಚೆನ್ನಾಗಿ ಹೊಡೆದಿದ್ದಾರೆ. ಈ ಘಟನೆಯು 75ರ ಡಿಸೆಂಬರ್ ಕೊನೆವಾರದಲ್ಲಿ ನಡೆಯಿತು.

—ಬ್ಲಿಟ್ಜ್ 28-2-76

● ನರಸಿಂಹರಾಜಪುರ ಸೆ.-೨೦ ಹರಿಜನ ಬಾಲಕಿಯೊಬ್ಬಳನ್ನು ಹೊತ್ತುಕೊಂಡುಹೋಗಿ ಕಾಡಿನಲ್ಲಿ ಅರಳಿಕೊಪ್ಪದವಾಸಿ ಬೋಮಣ್ಣ ಅತ್ಯಾಚಾರ ನಡೆಸಿದ.

—ಸಂಯುಕ್ತ ಕರ್ನಾಟಕ 22-9-76

'ಜಾತಿ ವಿನಾಶ'

ಮೂಲ : ಡಾ|| ಬಿ. ಆರ್. ಅಂಬೇಡ್ಕರ್
ಅನು : ಮ. ನ. ಜವರಯ್ಯ

೨

ಅಷ್ಟು ಮಾತ್ರವಲ್ಲ, ಈ ಸುಧಾರಣಾ ಕಾರ್ಯಕ್ಕೆ ನನ್ನದೂ ಒಂದಷ್ಟು ಪ್ರಯತ್ನ ಹಾಕುವುದರಲ್ಲಿ ಏನಾದರೂ ಅರ್ಥವಿದೆಯೆಂದು ನೀವು ನನ್ನನ್ನು ಆಹ್ವಾನಿಸಿದಾಗ, ಆ ಆಹ್ವಾನವನ್ನು ತಿರಸ್ಕರಿಸುವುದು ಅಸಾಧುವೆಂತಲೇ ನಂಬಿದ್ದೆ, ನಂಬುತ್ತೇನೆ. ನಿಮ್ಮ ಸಮಾಜ ಸುಧಾರಣಾ ಸಮಸ್ಯೆಗಳನ್ನು ಬಿಡಿಸಲು ನಾನು ಸೂಚಿಸಬಹುದಾಗಿದ್ದಂಥ ಸಲಹೆಗಳ ಅನುಕೂಲ–ಪ್ರತಿಕೂಲಗಳನೆಲ್ಲಾ ಮುಂದೆ ನೀವು ಚರ್ಚಿಸಬಹುದಿತ್ತು. ಆದ್ದರಿಂದಲೇ ನನ್ನ ಅಭಿಪ್ರಾಯಗಳನ್ನೆಲ್ಲಾ ನಿಮ್ಮೊಡನೆ ವಿಚಾರ ಮಾಡಲು ಇದೊಂದು ತಕ್ಕ ಅವಕಾಶವೆಂತಲೇ ನಾನು ನಂಬಿದ್ದೆ.

ವಿಪರ್ಯಾಸ !

ಭಾರತದಲ್ಲಿ ಸಮಾಜ ಸುಧಾರಣಾ ಕಾರ್ಯವೆಂದರೆ ತೀದಿದ್ದೂ ಹಾವಿನ ಮೇಲೆ ಕಾಲಿಟ್ಟಂತೆಯೇ ಸರಿ. ಭಾರತದಲ್ಲಿ ಸಮಾಜ ಸುಧಾರಕರ ಸಂಖ್ಯೆ ಕೇವಲ ಬೆರಳೆಣಿಸುವಷ್ಟೂ ಇಲ್ಲ. ಆದರೆ ಅವರನ್ನು ಟೀಕಿಸುವವರು ಮಾತ್ರ ಲೆಕ್ಕವಿಲ್ಲದಷ್ಟು ಜನ. ಈ ಟೀಕೆಗಾರರಲ್ಲೂ ಎರಡು ಜಾತಿಗಳು. ಒಂದು ಜಾತಿಯವರು ರಾಜಕೀಯ ಸುಧಾರಕರು ಮತ್ತೊಂದು ಜಾತಿಯವರು ಸಮಾಜವಾದಿಗಳು.


ಸವತಿ ಮತ್ಸರ

ವೈಚಾರಿಕ ಕುಶಲತೆ ಇಲ್ಲದೆ ಯಾವುದೇ ಸಮಾಜದಲ್ಲೂ ಅರ್ಥಪೂರ್ಣವಾದ ಪ್ರಗತಿ ಎಂದೆಂದಿಗೂ ಸಾಧ್ಯವಿಲ್ಲವೆಂಬುದು ಎಲ್ಲಾ ಕಾಲಕ್ಕೂ ಎಲ್ಲಾ ದೇಶಗಳಿಗೂ ಮನನೀಯವಾದ ಸಂಗತಿ. ಈ ವೈಚಾರಿಕ ಕುಶಲತೆಯ ಬೆನ್ನು ಹತ್ತಿ ಬಂದಿರುವ ಕೆಲವು ಅನೂಚಾನವಾದ ಕೆಟ್ಟ ಪದ್ಧತಿಗಳು ಇದರ ದೌರ್ಬಲ್ಯಕ್ಕೆ ಮುಖ್ಯ ಕಾರಣ. ಈ ಪದ್ಧತಿಗಳ ಹಾವಳಿಯಿಂದಾಗಿ ಹಿಂದೂ ಸಮಾಜದಲ್ಲಿ ವೈಚಾರಿಕ ಕುಶಲತೆ ಬೆಳೆಯಲು ಇಂದಿಗೂ ಸಾಧ್ಯವಾಗಿಲ್ಲವೆಂಬುದು ಮರು ಪ್ರಶ್ನೆಗೆ ಜಾಗವಿಲ್ಲದ ಮಾತು. ಆದ್ದರಿಂದಲೇ ಈ ದುಷ್ಟ ಪದ್ಧತಿಗಳನೆಲ್ಲಾ ನಾಮಾವಶೇಷ ಮಾಡುವ ಸಲುವಾಗಿಯೇ ಪ್ರಜ್ಞಾಪೂರ್ವಕವಾಗಿ ಜನ ಇಂದು ಎದ್ದು ನಿಲ್ಲಬೇಕಾಗಿದೆ. ಈ ಧ್ಯೇಯ ಧರಿಸಿಕೊಂಡೇ ಸಾಮಾಜಿಕ ಸಮ್ಮೇಳನಗಳ ತಳಹದಿಯ ಮೇಲೆ 'ರಾಷ್ಟ್ರೀಯ ಕಾಂಗ್ರೆಸ್' ತಲೆ ಎತ್ತಿತ್ತು. ದೇಶದ ರಾಜಕೀಯ ಸಂಘಟನೆಯ ನಡುವೆ ನುಸುಳಬಹುದಾಗಿದ್ದಂಥ ಈ ಸಾಮಾಜಿಕ ದೌರ್ಬಲ್ಯಗಳ ಕಾರಣ–ಪರಿಣಾಮಗಳನ್ನು ಚರ್ಚಿಸುವ, ಆ ಮೂಲಕ ರಾಜಕೀಯ ಸ್ವಾತಂತ್ರ್ಯ ಸಾಧನೆಯ ಘನ ಉದ್ದೇಶವನ್ನು ಅದು ಒಳಗೊಂಡಿತ್ತು. ಹಿಂದೂ ಸಮಾಜದ ಸಂಘಟನಾ ಹಾದಿಯಲ್ಲಿ ಎದುರಾಗುತ್ತಿದ್ದಂಥ ಈ ಸಾಮಾಜಿಕ ದುರ್ಬಲ ಧೋರಣೆಗಳನೆಲ್ಲಾ ಬುಡಸಹಿತ ಕಿತ್ತೆಸೆಯುವಂಥ ಉದ್ದಂಡ ಘೋಷಣೆಗಳನ್ನು ಅದೇ ರಾಷ್ಟ್ರೀಯ ಕಾಂಗ್ರೆಸ್ ಬಹಳ ಕಾಲದವರೆಗೂ ಪರ್ವತದ ಮೇಲಿಂದ ಸಾರುತ್ತಲೇ ಬಂದಿತ್ತು. ಅನೇಕ ಬಾರಿ ರಾಜಕೀಯ ಕಾಂಗ್ರೆಸ್ ಮತ್ತು ಅದರ ಸಾಮಾಜಿಕ ಸಮ್ಮೇಳನ–ಎರಡೂ ಎರಡು ಕೈಗಳಂತೆ ಒಂದೇ ಕಾರ್ಯದಲ್ಲಿ ತೊಡಗಿದ್ದು ಒಂದೇ ವೇದಿಕೆಯ ಮೇಲೆ ತಮ್ಮ ವಾರ್ಷಿಕ ಅಧಿವೇಶನಗಳನ್ನು ನಡೆಸುತ್ತಿದ್ದವು. ಹೀಗೆ ಎರಡು ಕೈಗಳಿಂದ ಒಂದೇ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸುತ್ತಿದ್ದಂಥ ಕಾಂಗ್ರೆಸಿನ ಎರಡು ಕೈಗಳೂ ಕಾಲಕ್ರಮದಲ್ಲಿ ಎರಡು ಪಕ್ಷಗಳಾಗಿ ಒಡೆದು ಹೋಳಾಗಿ, ಬದ್ಧ ದ್ವೇಷದ ಉಸಿರಾಡುತ್ತಲೇ ಬೆಳೆದು ನಿಂತವು. ಎರಡು ಗುಂಪುಗಳ ನಡುವೆ ಒಂದು ಅಸಹನೀಯವಾದ ವೈಷಮ್ಯ ಎದ್ದು ನಿಂತು ಕೊನೆಗೆ ಈ ಎರಡು ಕೈಗಳೇ ಪರಸ್ಪರ ಹೊಡೆದಾಟದಲ್ಲಿ ತೊಡಗಿದವು. ರಾಜಕೀಯ ಸುಧಾರಣೆಯೇ ಮುಖ್ಯವೆಂದು ಸಾರುತ್ತಿದ್ದ ಗುಂಪು ರಾಜಕೀಯ ಹಾದಿಯಲ್ಲಿ—ಮತ್ತು ಸಾಮಾಜಿಕ ಸುಧಾರಣೆಯೇ ಬಹು ಮುಖ್ಯವೆಂದು ಸಾರುತ್ತಿದ್ದ ಇನ್ನೊಂದು ಗುಂಪು ಸಾಮಾಜಿಕ ಹಾದಿಯಲ್ಲಿ ನಡೆಯತೊಡಗಿದವು. ಹೀಗೆ ಹೋಳಾದ ಈ ಎರಡು ಗುಂಪುಗಳು ನಿರಂತರ ಸವತಿಮತ್ಸರದಲ್ಲೇ ಬೆಳೆದು ಬಂದವು. ಆಮೇಲೆ ರಾಜಕೀಯ ಸುಧಾರಣಾ ಗುಂಪು ರಾಷ್ಟ್ರೀಯ ಕಾಂಗ್ರೆಸ್ಸಿನ ಕೈ ಹಿಡಿಯಿತು. ಸಮಾಜ ಸುಧಾರಣಾ ಗುಂಪು ಸಾಮಾಜಿಕ ಸಮ್ಮೇಳನದಲ್ಲಿ ಸೇರಿತು. ಇನ್ನೂ ಮುಂದೆ ಹೋದ ಇವೆರಡರ ವೈರತ್ವ, ಸಮಾಜ ಸುಧಾರಣಾ ಗುಂಪು ಮುಂದುವರಿಯಬೇಕು, ಇಲ್ಲವೆ, ರಾಜಕೀಯ ಸುಧಾರಣಾ ಗುಂಪು ಮುಂದುವರಿಯಬೇಕು.–ಎರಡೂ ಬದುಕಿರಲು ಸಾಧ್ಯವೇ ಇಲ್ಲವೆಂಬಂಥ ಸ್ಥಿತಿಗೆ ಹೋಯಿತು. ಆ ನಂತರ ಸುಮಾರು ಹತ್ತು ವರ್ಷಗಳವರೆಗೂ ಈ ಎರಡು ಗುಂಪುಗಳೂ ಹಿಡಿದಿದ್ದ ಹಾದಿಯಲ್ಲಿ ಯಾವುದೂ ಏನನ್ನೂ ಸರಿಯಾಗಿ ಸಾಧಿಸಲಾಗದೆ, ಯಾರೊಬ್ಬರೂ ಸರಿಯಾಗಿ ಯಾವ ಪಕ್ಷದಲ್ಲೂ ನೆಲೆಯಾಗಿ ನಿಲ್ಲದೆ, ಎಡಬಿಡಂಗಿತನದಲ್ಲೇ ಕುಣಿದು ಕುಪ್ಪಳಿಸಿ, ಕೊನೆಗೆ ಇಬ್ಬರೂ ಅಪಜಯದಲ್ಲೇ ಜಾರಿಬಿದ್ದರು.

ಉದ್ಘಾಟಕ ಹುಚ್ಚನಾದ !

ಆದರೆ ದುರದೃಷ್ಟವಶಾತ್, ಸಮಾಜ ಸುಧಾರಣಾ ಪಕ್ಷ ತನ್ನ ಸತ್ಯಾಗ್ರಹದಲ್ಲೇ ಕಾಲಹರಣ ಮಾಡಿ, ಕೊಟ್ಟಕೊನೆಗೆ ಉಪವಾಸದಲ್ಲೇ ಕೊನೆ ಉಸಿರೆಳೆಯಿತು. ಈ ಸಮಾಜ ಸುಧಾರಣಾ ಸಮ್ಮೇಳನವನ್ನು ಮಹದಾನಂದದಿಂದ ಉದ್ಘಾಟಿಸಿದ ವ್ಯಕ್ತಿ, ಕೊನೆಗೆ ಉಸಿರು ಕಟ್ಟಿದಂತಾಗಿ ಅಸಾಧ್ಯ ಫಜೀತಿಗೆ ಸಿಕ್ಕಿ ಪೇಚಾಡಬೇಕಾಯಿತು. ಏಕೆಂದರೆ ಪಕ್ಷದಲ್ಲಿದ್ದ ಬಹಳ ಜನ ಕಲಿತ ಹಿಂದೂಗಳು ರಾಜಕೀಯ ಸುಧಾರಣಾ ಪಕ್ಷಕ್ಕೆ ಮಾತ್ರ ಜೈಕಾರ ಹೇಳಿದರೇ ಹೊರತು, ಸಮಾಜ ಸುಧಾರಣೆಯ ಮಾತು ಬಂದಾಗ ಯಾರೂ ತುಟಿಪಿಟಿಕಿಸಲಿಲ್ಲ. ಕಾರಣ ಸಮಾಜ ಸುಧಾರಣೆಯಂಥ ತಾಪತ್ರೆಯದ ಕೆಲಸ ಮಾಡುವ ದರ್ದು ಅವರಿಗೇನೂ ಇರಲಿಲ್ಲ. ಇದರಿಂದಾಗಿ ರಾಜಕೀಯ ಸುಧಾರಣ ಪಕ್ಷ ದರ್ಪದ ಕಿರೀಟ ಧರಿಸಿಕೊಂಡು ಮೆರೆಯಿತು. ಸಮಾಜ ಸುಧಾರಣಾ ಪಕ್ಷ ದಿಕ್ಕು ದೆಸೆಯಿಲ್ಲದೆ ಮೂಲೆ ಸೇರಿಬಿಟ್ಟಿತು.

(ಮುಂದುವರಿಯುವುದು)



ದಲಿತ ಪ್ರತಿಭೆ: ಮರಿಯಪ್ಪ

ಸದಾ ಚಿಂತೆ ತುಂಬಿಕೊಂಡ ಮುಖ. ತೀರಾ ಕಡಿಮೆ ಮಾತು. ಜನರ ಗುಂಪಿನಿಂದ ಸಾಕಷ್ಟು ಹೊರಗೆ ಬದುಕಬೇಕೆನ್ನುವ ಚರ್ಯೆ. ಇವಿಷ್ಟನ್ನೇ ಗಮನಿಸಿದರೆ, ಚನ್ನರಾಯಪಟ್ಟಣದ, ಈಗ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಎಂ. ಎ. ಓದುತ್ತಿರುವ ಮರಿಯಪ್ಪ ಸಾಮಾಜಿಕವಾಗಿ, ಆರ್ಥಿಕವಾಗಿ ತುಳಿತಕ್ಕೊಳಪಟ್ಟ ಜನಾಂಗದ ಮುಕ್ಕಾಲು ಪಾಲು ವಿದ್ಯಾರ್ಥಿಗಳನ್ನು ಪ್ರತಿನಿಧಿಸುತ್ತಾರೆ.

ನೆಲೆ ಇಲ್ಲದೆ ಊರೂರು ಮೇಲೆ ಅಲೆದು ಜೋತಿಷ್ಯ ಹೇಳಿ ಬದುಕುವ 'ಜೋಷಿ' (ಸಾದಾ ಜೋಷಿ) ಜಾತಿಯಲ್ಲಿ ಹುಟ್ಟಿ ಆಕಸ್ಮಿಕವಾಗಿ ವಿದ್ಯಾವಂತರಾಗಿ ಎಂ. ಎ. ವರೆಗೆ ಬಂದವರು ಮರಿಯಪ್ಪ ಒಬ್ಬರೆ. ತನ್ನ ಹೊರತು ಬೇರೆ ಓದುವವರನ್ನು ಎಷ್ಟು ಹುಡುಕಿದರೂ ಒಬ್ಬರೂ ಸಿಕ್ಕಿಲ್ಲ ಎನ್ನುವ ಇವರು, ಊರೂರು ಅಲೆದು ಜೋತಿಷ್ಯ ಹೇಳುವಾಗ 'ಜೋತಿಷಿ'ಗಳು ಮಾಡುವ ಮೋಸ ಇತ್ಯಾದಿಗಳನ್ನು ಟೀಕಿಸುತ್ತಾ, ಅವರು ಅನಿವಾರ್ಯವಾಗಿ ಹಾಗೆ ಬದುಕಬೇಕಾಗಿರುವಂತ ವ್ಯವಸ್ಥೆಯನ್ನು ಖಂಡಿಸುತ್ತಾರೆ.

ತಮ್ಮ ವಿದ್ಯಾರ್ಥಿತನದ ಒಂಟಿ ತನ ವನ್ನೆಲ್ಲ ಪುಸ್ತಕಗಳ ಜೊತೆ ನೀಗಿಸಿಕೊಂಡು ಬಂದಿರುವ ಮರಿಯಪ್ಪ ಪರೀಕ್ಷೆಗಳಲೆಲ್ಲಾ ಮೊದಲ ದರ್ಜೆಯಲ್ಲೇ ತೇರ್ಗಡೆಯಾಗಿದ್ದಾರೆ. ಪಿ. ಯು. ಸಿ ವರೆಗೆ ಚನ್ನರಾಯಪಟ್ಟಣದಲ್ಲೇ ಓದಿ, ಎಸ್. ಎಸ್. ಎಲ್. ಸಿ ಫಸ್ಟ್ ಕ್ಲಾಸ್ ಮತ್ತು ಪಿ. ಯು. ಸಿ. ಯಲ್ಲಿ ಫಸ್ಟ್ ರ್‍ಯಾಂಕ್ ಪಡೆದ ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ. ಎ. ಪದವಿಯನ್ನು ಈ ವರ್ಷ (1976) ಫಸ್ಟ್ ರ್‍ಯಾಂಕ್‌ನಲ್ಲಿ ಪಾಸು ಮಾಡಿದ್ದಾರೆ. ಇಷ್ಟೆಲ್ಲ ಆದರೂ ತನಗೆ ಎಂ ಎ. ಆದ ಮೇಲೆ ಕೆಲಸ ಸಿಕ್ಕುತ್ತೆ ಅನ್ನುವ ನಂಬಿಕೆಯೇ ಇಲ್ಲ. - ಹಣವಿದ್ದರಷ್ಟೇ ರ್‍ಯಾಂಕಿಗೆ ಬೆಲೆ. ಹಣವಿಲ್ಲದೆ ರ್‍ಯಾಂಕ್ ಇದ್ದರೆ useless ಎನ್ನುತ್ತಾರೆ. ವ್ಯವಸ್ಥೆಯ ಬಗ್ಗೆ ಸಿಟ್ಟು ತುಂಬಿಕೊಂಡು ಯೋಚನೆಗಳ ಕಿರುಕುಳದಿಂದಾಗಿ ಸಾಮೂಹಿಕತೆಯಿಂದ ದೂರ ನಿಂತಿರುವ ಮರಿಯಪ್ಪನವರು ಕವನಗಳನ್ನೂ ಬರೆಯುತ್ತಿದ್ದು, ಆ ಕವನಗಳಲ್ಲೆಲ್ಲಾ ತನ್ನ ಒಂಟಿತನದ ನೋವು, ದಲಿತನಾಗಿ ಅನುಭವಿಸುತ್ತಿರುವ ಯಾತನೆಗಳನ್ನು ತೀರಾ ವೈಯುಕ್ತಿಕವಾಗಿ ಹೇಳಹೊರಟಿದ್ದಾರೆ.

ಏನ್ಮಾಡನಾ ಈ ನನ್ಮಕ್ಕಳ್ನ

ಸುಮ್ನಿದ್ರು ಬುಡಲ್ಲ
ಸುಮ್ನಿರ್ದಿದ್ರು ಬುಡಲ್ಲ
ದುಡುಸ್ಕತ್ತರೆ, ದಂಡಸ್ತರೆ
ನಾವ್ ಎಂಗಿರಕ್ಕು ಬುಡಲ್ಲ
ಏನ್ ಮಾಡನ ಈ ನನ್ಮಕ್ಕಳ್ನ.

ಬಡವ್ರು ಬಗ್ರು ಅಂತ ಕೀಳಾಗ್ಕಂಡು
ಕೆಳಗ್ಮಡಗ್ತರೆ ಕೆಳಗ್ನರಿಂದನೆ ಕಿತ್ಕಂದು
ಜೀವ್ನ ನಡಸ್ತರೆ. ಕೊಡದಿದ್ರೆ
ಕೂನಿ, ಕೊಲೆ, ಸುಲ್ಗೆ ಮಾಡ್ತರೆ
ಏನ್ಮಾಡನಾ ಈ ನನ್ಮಕ್ಕಳ್ನ

ಸುಮ್ನಿದ್ರು ಬುಡಲ್ಲ. ಸುಮ್ನಿರ್ದಿದ್ರು ಬುಡಲ್ಲ
ಏನ್ಮಾಡನ ಈ ನನ್ಮಕ್ಕಾಳ್ನ

—ಜನಾರ್ಧನ ಬೆಂಗಳೂರು

(5ನೇ ಪುಟದಿಂದ)

24. ಜಿಲ್ಲೆಯಲ್ಲಿನ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆ ಸಣ್ಣ ರೈತರು ಮತ್ತು ವ್ಯವಸಾಯ ಕೂಲಿಗಾರರ ಯೋಜನೆಗಳಲ್ಲಿ ಸದಸ್ಯರಾಗಿ ಸೇರುವ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳವರ ಪ್ರವೇಶ ಶುಲ್ಕವನ್ನು ಆ ಸಂಸ್ಥೆಗಳೇ ಭರಿಸುತ್ತವೆ. ವ್ಯವಸಾಯ ಸಾಲ ಮತ್ತು ಸೇವಾ ಸಹಕಾರ ಸಂಘಗಳಲ್ಲಿ ಸದಸ್ಯರಾಗುವವರ ಷೇರು ಬಂಡವಾಳವನ್ನು ಸಮಾಜ ಕಲ್ಯಾಣ ಇಲಾಖೆಯು ಒದಗಿಸುತ್ತದೆ.
25. ಅಭಿವೃದ್ಧಿ ಗೃಹನಿರ್ಮಾಣ, ಪಂಚಾಯಿತಿ ರಾಜ್ ಮತ್ತು ಸಹಕಾರ ಇಲಾಖೆಗಳ ಸಂಯುಕ್ತ ಯೋಜನೆಯಲ್ಲಿ ಪ್ರಯೋಜನ ಪಡೆಯುವವರು ಹರಿಜನ ಗಿರಿಜನ ಮುಂತಾದ ದುರ್ಬಲವರ್ಗಗಳ ಶಾಲಾ ಪೂರ್ವದ ಮಕ್ಕಳು, ಗರ್ಭಿಣಿ ಮತ್ತು ಬಾಣಂತಿಯರು.
26. ಪ್ರತ್ಯೇಕತೆಯನ್ನು ತಡೆಗಟ್ಟಲು ನಗರಾಭಿವೃದ್ಧಿ ಮಂಡಲಿಯು ಶೇ. 10 ಭಾಗ ನಿವೇಶನಗಳನ್ನು ಹರಿಜನರಿಗೆ ಮೀಸಲಿಟ್ಟಿದೆ.
27. ಅರಣ್ಯ ಇಲಾಖೆಯು ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು 200 ರೂ. ಬೆಲೆ ಬಾಳುವ ಮರವನ್ನು ಉಚಿತವಾಗಿ ಪ್ರತಿ ಕುಟುಂಬಕ್ಕೂ ಒದಗಿಸುತ್ತದೆ.
28. ಎಲ್ಲಾ ಹರಿಜನ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಸಂಪೂರ್ಣ ಫೀ ಮಾಪಿ ಮಾಡಿದೆ. ಸರ್ಕಾರಿ ಸ್ಥಳೀಯ ಸಂಸ್ಥೆಗಳು ಮತ್ತು ಧನ ಸಹಾಯ ಪಡೆದ ಸಂಸ್ಥೆಗಳಲ್ಲೆಲ್ಲಾ ಇದು ಪಾಲನೆಯಾಗುತ್ತದೆ. ಫೀ ಮಾಪಿ ಮಾಡುವಾಗ ವಿದ್ಯಾರ್ಥಿಯ ವಯಸ್ಸು, ವರಮಾನ ಅಥವಾ ಅವನ ಅನುತ್ತೀರ್ಣತೆಯ ಸಂಖ್ಯೆಗಳನ್ನು ಗಣಿಸುವುದಿಲ್ಲ.
29. ಎಲ್ಲಾ ಮುಜರಾಯಿ (ದೇವಸ್ಥಾನ) ಸಮಿತಿಗಳಿಗೆ ಹರಿಜನ ಸದಸ್ಯರನ್ನು ಖಾಯಮ್ಮಾಗಿ ನಾಮಕರಣ ಮಾಡಲಾಗುತ್ತದೆ.

(ಕರ್ನಾಟಕ ಸರ್ಕಾರ ಪ್ರಕಟಿಸಿರುವ Welfare of Backward Classes—Policies and Programmes Implemented (1973-76) ಎಂಬ ಪುಸ್ತಕದಿಂದ).

ಹೊರಟಿದ್ದೇವೆ . . .

ಎದೆಯಲ್ಲಿ ಉರಿವ ಜ್ವಾಲಾಗ್ನಿ.
ನೆತ್ತಿಯಲ್ಲಿ ಹಿಮಾಲಯ ಹೊತ್ತು.
ನರನಾಡಿಯಲ್ಲೆಲ್ಲಾ ವಿಷಗಂಗೆಯ
ಹರಿಸಿಕೊಂಡು ಹುಡುಕುತ್ತಾ
ಹೊರಟ್ಟಿದ್ದೇವೆ ಈ ಬೆಂಗಾಡಲಿ.
ಹೊಸಗಿ ತೂರಿದ ಆಸೆ ಪಕಳೆಗಳ,
ನುಚ್ಚು ನೂರಾದ ಭವಿತವ್ಯದ
ಕನಸುಗಳ, ಕುಸಿದು ನುಂಗುವ
ವರ್ತಮಾನದಾಳ
ಶೋಧಿಸ ಹೊರಟಿದ್ದೇವೆ.
ಇತಿ ಹಾಸದ ನೊಗ ಹೊತ್ತೇ
ಸಾಗಿ ಸತ್ತ
ಶವಗಳ ಅಶೋತ್ತರಗಳ
ಮರೆತು ಸಾವಿರ ವರ್ಷಗಳ
ಒಡೆತನ ಸವಲತ್ತಿನ ತುಣುಕ
ಕೊಟ್ಟಿಗಷ್ಟೆ ಮರೆತ ಮಂದತನವ
ಝಾಡಿಸಿ ಒದ್ದು
ತೂಕಡಿಸುವ ಇತಿಹಾಸಕೆ
ಢೀ ಕೊಟ್ಟು
ಹೆಗಲ ಪಲ್ಲಕ್ಕಿಯಲ್ಲಿ ಸವಾರಿಸುತ್ತಾ
ಬಂದವರ ಎದೆಗೊದ್ದು ಹೊತು,
ಕೆಚ್ಚಲು ಕೊಯ್ದು ಮಂದಿಯ
ಹಸಿ ಹಸಿ ಅಗೆದು ತಿನ್ನಲು ಹೊರಟಿದ್ದೇವೆ.
ಕರೀ ಜನರ ಒಡಲ ಉಸಿರ
ಬಿರುಗಾಳಿಯಾಗಿಸಿದ
ಅಂಬೇಡ್ಕರ್ ಸಿಂಹಗರ್ಜನೆಗೆ ಇನ್ನೂ
ಕರಗದಿರುವ ಖೋಜಾ ಕುಚವುಳ್ಳ,
ನೀವು ಇದ್ದಲ್ಲೇ ಅರೆಸತ್ತು ಬಿದ್ದುಕೊಂಡಿರಿ.
ಇದೋ ಹೊರಟಿದ್ದೇವೆ ನಾವು
ರಣ ವೀಳ್ಯ ಕೊಟ್ಟು.

ಕೆ. ರಾಮಯ್ಯ.

ವಿದ್ಯಾರ್ಥಿ ಒಕ್ಕೂಟ

ಮೈಸೂರಿನ ಅನುಸೂಚಿತ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿ ಒಕ್ಕೂಟ ಇತ್ತೀಚೆಗೆ ಸಭೆಸೇರಿ 1976-77 ನೇ ಸಾಲಿಗೆ ನೂತನ ಕಾರ್ಯಕಾರಿ ಮಂಡಲಿಯನ್ನು ರಚಿಸಿದೆ. ಈ ಕೆಳಕಂಡವರು ಕಾರ್ಯ ಕರ್ತರಾಗಿ ಆಯ್ಕೆಗೊಂಡಿದ್ದಾರೆ.

ಸರ್ವಶ್ರೀ : ಶಿವಣ್ಣ ಅಧ್ಯಕ್ಷ, ಎಸ್. ನಾರಾಯಣಸ್ವಾಮಿ ಉಪಾಧ್ಯಕ್ಷ, ಎಸ್. ಜಯಣ್ಣ ಪ್ರಧಾನ ಕಾರ್ಯದರ್ಶಿ, ಜಿ. ಎಸ್. ಪರಮೇಶ, ಚಿಕ್ಕಚನ್ನಯ್ಯ, ಮಂಚಯ್ಯ. ಡಿ. ಮಹಾದೇವಯ್ಯ ಮತ್ತು ಕು|| ಮಲ್ಲಾಜಮ್ಮ ಸಹ ಕಾರ್ಯದರ್ಶಿಗಳು. ಈರ ಖಜಾಂಚಿ, ಕೆ. ಬಿ. ಸಿದ್ದಯ್ಯ ಮತ್ತು ಲಾಲ್ ಸಿಂಗ್ ನಾಯಕ್ ಸಂಚಾಲಕರು.

........ಸಾಮಾಜಿಕ ಬಹಿಷ್ಕಾರ

(1ನೇ ಪುಟದಿಂದ)

ಸಾಮಾನುಗಳನ್ನು ಮಾಡಿಕೊಡಬಾರದು. ಕುಂಬಾರರು ಮಡಿಕೆ ಕೊಡ ಬಾರದು. ಅಂಗಡಿಯವರು ಹರಿಜನರಿಗೆ ಸಾಮಾನು ಕೊಡ ಕೂಡದು. ಇದನ್ನು ಮೀರಿ ನಡೆದ ಕಸುಬುದಾರರಿಗೆ ತಲಾ 300ರೂ ದಂಡವನ್ನು ಪಂಚಾಯ್ತಿಗೆ ಕೊಡಬೇಕೆಂದು ಛೇರ್ಮನ್ನಿನ ಆಜ್ಞೆ ಇದೆ.

ತಮ್ಮ ಮೇಲೆ ವಿಧಿಸಿದ ಸಾಮಾಜಿಕ ಬಹಿಷ್ಕಾರದ ಬಗ್ಗೆ ಹರಿ ಜನರು ಪೋಲೀಸ್ ಸ್ಟೇಷನ್ನಿಗೆ ದೂರು ನೀಡಲು ಹೋದಾಗ ಛೇರ್ಮನ್ ಮತ್ತು ಆತನ ಬೆಂಬಲಿಗರು ಸ್ಟೇಷನ್ನಿನಲ್ಲಿಯೇ ಇದ್ದ ಕಾರಣ ಪೋಲೀಸ್ ಅಧಿಕಾರಿಗಳು ಯಾವುದೇ ವಿಷಯವನ್ನೂ ಗಮನಕ್ಕೆ ತೆಗೆದುಕೊಳ್ಳದೆ ಈ ನ್ಯಾಯವನ್ನು ನಿಮ್ಮ ಊರಿನ ಪಂಚಾಯ್ತಿಯಲ್ಲೇ ತೀರ್ಮಾನಿಸಿ ಕೊಳ್ಳಿರೆಂದು ಕಳುಹಿಸಿಬಿಟ್ಟಿದ್ದಾರೆ.

ಮುಂದಿನ ದಿನಗಳಲ್ಲಿ ಹರಿಜನರ ಮನೆಗಳಿಗೆ ರಾತ್ರಿ ವೇಳೆಯಲ್ಲಿ ಬ್ಯಾಟರಿ ಬಿಡುವುದು, ಮನೆ ಹಿತ್ತಲಿನಲ್ಲಿ ಸುಳಿದಾಡುವುದು, ಮನೆಗಳಿಗೆ ಕಲ್ಲು ತೂರುವ ಚಟುವಟಿಕೆಗಳು ನಡೆಯ ತೊಡಗಿದವು. ಇದೆಲ್ಲದರ ಎದುರಾಗಿ ಸಾಕಷ್ಟು ತಲೆಹಾಕಿದ ಹರಿಜನ ಯುವಕ ಕೆ. ಸಿದ್ದರಾಜು ವನ್ನು ಸವರ್ಣೀಯರು ಚೆನ್ನಾಗಿ ಹೊಡೆದಿದ್ದಾರೆ. ಬಹಳ ಪೆಟ್ಟು ತಿಂದ ಸಿದ್ದರಾಜು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ನಾಲ್ಕುದಿನ ಮತ್ತು ಮೈಸೂರಿನ ಕೆ. ಆರ್. ಆಸ್ಪತ್ರೆಯಲ್ಲಿ ಆರು ದಿನಗಳು ಚಿಕಿತ್ಸೆ ಪಡೆ ದಿದ್ದು, ಆಗಾಗ್ಗೆ ವಿಪರೀತ ಎದೆನೋವು ಉಂಟಾಗುವುದೆಂದು ಹೇಳು ತ್ತಾರೆ.

25-9-76ರಂದು ಮರಾಮತ್ತು (PWD) ಮಂತ್ರಿಯವ ರಾದ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿಯವರು ಕಂದಾಗಾಲಕ್ಕೆ ಭೇಟಿ ನೀಡಿದಾಗ, ಹರಿಜನರು ಇದುವರೆಗೂ ನಡೆದಿರುವ ಸವರ್ಣೀಯರ ಕಿರು ಕುಳವನ್ನು ಹೇಳಿಕೊಂಡು ಮನವಿ ಸಲ್ಲಿಸಿದರು. ಅದಕ್ಕೆ ಮಾನ್ಯ ಮಂತ್ರಿಗಳು ಇಂಥ ಜಾತಿಗಲಾಟೆಗಳು ಡೆಲ್ಲಿಯಲ್ಲೂ ನಡೀತಾ ಇದೆ. ಬೆಂಗಳೂರಿನಲ್ಲೂ ನಡೀತಾ ಇದೆ. ಸ್ವತಃ ನಾನೆ ಅಸ್ಪೃಶ್ಯತೆಯನ್ನು ಅನುಭವಿಸುತ್ತಿದ್ದೇನೆ. ಆದ್ದರಿಂದ ನೀವೇ ಸವರ್ಣೀಯರ ಜೊತೆ ಸಂಧಾನ ಮಾಡಿಕೊಳ್ಳಿ. ಈ ಬಗ್ಗೆ ನಾನು ಸವರ್ಣೀಯ ಮುಖಂಡರು ಗಳಿಗೆ ಹೇಳಿಹೋಗುತ್ತೇನೆ ಎಂದು ಹೇಳಿದರು. ಆದರೆ ಇದುವರೆವಿಗೂ ಯಾವ ರೀತಿಯ ಬದಲಾವಣೆಯೂ ಆಗಿಲ್ಲವೆಂದು ಊರಿನ ಹರಿಜನರು ದುಃಖವನ್ನು ವ್ಯಕ್ತ ಪಡಿಸಿದರು.

'ಪಂಚಮ'

ಚಂದಾ ವಿವರ :

ಒಂದು ವಿಶೇಷಾಂಕ ಮತ್ತು ಅಂಚೆ ವೆಚ್ಚ ಸೇರಿ
ವಾರ್ಷಿಕ ಚಂದಾ : 5 ರೂ. ಮಾತ್ರ.

ಸಂಪಾದಕ : ರಾಮದೇವ ರಾಕೆ
ಜೊತೆಗೆ : ಶಿವಾಜಿ ಗಣೇಶನ್
ಶಿವಮಲ್ಲ ದೇವನೂರು
ಪ್ರಕಾಶಕ : ಎಚ್. ಗೋವಿಂದಯ್ಯ

ವಿಳಾಸ : 2649/2, ಕೆ. ಜಿ. ಕೊಪ್ಪಲು, ಮೈಸೂರು-9

ಮುದ್ರಣ : ಆಂದೋಲನ ಮುದ್ರಣ, ಮೈಸೂರು-9